**Code No. 10 X(E)**

**ವಾಣಿಜ್ಯ ಪರೀಕ್ಷೆಗಳು**

# ಕನ್ನಡ ಬೆರಳಚ್ಚು – ಪ್ರಥಮ ದರ್ಜೆ – ಪ್ರಥಮ ಪತ್ರಿಕೆ

ಜೂಲೈ, 2015

ಸಮಯ : 15 ನಿಮಿಷಗಳು

ಅಂಕಗಳು : 100

***ಸೂಚನೆಗಳು :***
1) ಈ ಕೆಳಗೆ ಕೊಟ್ಟಿರುವ ವಿಷಯವನ್ನು 10 ರಿಂದ 75 ಸ್ಥಾನಗಳಿಗೆ ಅಂಚಿನ ತಡೆಗಳನ್ನು ಸ್ಥಿರಪಡಿಸಿಕೊಂಡು ಎರಡು ಸಾಲುಗಳ ತೆರಪಿನಲ್ಲಿ ಬೆರಳಚ್ಚು ಮಾಡಬೇಕು.
2) ಕಾಗದದ ಒಂದು ಭಾಗದಲ್ಲಿ ಮಾತ್ರ ಬೆರಳಚ್ಚು ಮಾಡಬೇಕು.
3) ತಪ್ಪಿಲ್ಲದೆ ಅಂದವಾಗಿ ಬೆರಳಚ್ಚು ಮಾಡಲು ವಿಶೇಷ ಗಮನ ಕೊಡಬೇಕು.

---

ಭಾರತದಲ್ಲಿ ಹೆಣ್ಣು ಗಂಡು ಎಂಬೆರಡು ಶಕ್ತಿಗಳು ಪ್ರಕೃತಿ – ಪುರುಷ. ಎನಿಸಿ ಪರಸ್ಪರ ಪೂರಕಗಳು, ಒಂದೇ ನಾಣ್ಯದ ಎರಡು ಮುಖಗಳು ಆಗಿವೆ. ಇವೆರಡರಲ್ಲಿ ಯಾವುದೂ ಮೇಲಲ್ಲ. ಯಾವುದೂ ಕೀಳಲ್ಲ. ಸಮಾಜವೂ ಅಲ್ಲ. ಸ್ತ್ರೀ ಪುರುಷರಲ್ಲಿರುವ ಪರಸ್ಪರ ಬೇಧ ವೈವಿಧ್ಯಗಳು ಮೂಲಭೂತವಾಗಿದ್ದು, ಬದಲಾಯಿಸಲಾಗದಂಥವು ಆಗಿವೆ. ಹೆಂಗಸರೂ ಮಾನವರು, ಅವರಿಗೂ ಮಾನಸಿಕ ಮತ್ತು ಆಧ್ಯಾತ್ಮಿಕ ರಂಗಗಳಲ್ಲಿ ಪುರುಷರಷ್ಟೇ ವಿಕಾಶ ಹೊಂದಲು ಪೂರ್ಣ ಹಕ್ಕು – ಅವಕಾಶಗಳಿವೆ. ಪುರುಷರು ಮಾಡುವ ಕೆಲವು ಕೆಲಸಗಳನ್ನು ಸ್ತ್ರೀಯರು, ಸ್ತ್ರೀಯರು ಮಾಡುವ ಕೆಲವು ಕೆಲಸಗಳನ್ನು ಪುರುಷರು, ಮಾಡಲಾರರು. ಇದರಿಂದ ಸ್ತ್ರೀ ಅಥವಾ ಪುರುಷ ತಂತಮ್ಮ ಸ್ವಭಾವಕ್ಕೆ ಸರಿ ಹೊಂದುವ ಕೆಲಸವನ್ನು ಚೆನ್ನಾಗಿ ಮಾಡಬೇಕು.

ಪಾಶ್ಚಾತ್ಯ ದೇಶಗಳಂತೆ ಭಾರತದಲ್ಲಿ ಶರೀರ ಸುಖವೇ ಸ್ತ್ರೀ ಪುರುಷರ ಸಂಬಂಧದ ಮೂಲ ಸೂತ್ರವಲ್ಲ. ಇಲ್ಲಿ ಮದುವೆ ಎಂಬುದು ಹೆಣ್ಣು ಗಂಡುಗಳು ಕಲ್ಪಿಸಿಕೊಳ್ಳುವ ಅನುಕೂಲವಲ್ಲ. ಅದು ಒಂದು ಅಗತ್ಯವಾದ ಪವಿತ್ರ ಸಂಸ್ಕಾರ, ಸಮಾಜ ಸೇವೆ ಮತ್ತು ಆಧ್ಯಾತ್ಮಿಕ ವಿಕಾಸಗಳಲ್ಲಿ ಹೆಂಗಸರಿಗೆ ಅವಕಾಶವಿದ್ದರೂ, ವಂಶಾಭಿವೃದ್ಧಿಯ ಒಂದು ಹಂತ ಮುಗಿದ ನಂತರ ಪತಿ ಪತ್ನಿಯ ಸಂಬಂಧವು, ಮಾತೃ ಸಂಬಂಧದಿಂದ ಪುಣ್ಯಪ್ರಧ ಪಾವನ, ಪವಿತ್ರ ಆಗಬೇಕಾದುದು ಈ ಎರಡು ಜೀವಿಗಳ ವಿಕಾಸಕ್ಕೆ ಅನಿವಾರ್ಯವಾದುದು. ಭಾರತದಲ್ಲಿ ಸ್ತ್ರೀಯರನ್ನು ಅಮ್ಮ ತಾಯಿ ಎಂದೇ ತಿಳಿದು ಕರೆದು ಜಗಜ್ಜನನಿಯ ರೂಪದಲ್ಲಿ ಗೌರವಿಸಲಾಗುತ್ತದೆ. ಸ್ತ್ರೀಯಂತೆಯೇ ಗಾಯಿತ್ರಿ,

[ Turn over

ಗೋವು ಗಂಗೆ, ಗೀತೆ ಭೂಮಿಗಳನ್ನೂ ಮಾತೆಯಾಗಿ ಕಾಣುವ ಪರಿಪಾಠ ಇಲ್ಲಿದೆ. ಹೆಂಡತಿಯನ್ನು ಬಿಟ್ಟು ಇತರೆ ಇಲ್ಲ ಸ್ತ್ರೀಯರೂ ತಾಯಿಯ ಸಮಾನರೂ ಎಂಬುದೇ ಭಾರತೀಯರ ಆದರ್ಶಶೀಲ, ಚಾರಿತ್ರ್ಯ, ಪ್ರೇಮ, ಸೇವೆ, ವಾತ್ಸಲ್ಯ, ಸಹಿಷ್ಣುತೆ, ತ್ಯಾಗಗಳಿಂದ ಅಮರವಾಗುವ ಸ್ತ್ರೀಯ ತಾಯಿ ತನಕ್ಕೆ ಶ್ರೇಷ್ಠ ಸ್ಥಾನವಿದೆ. ಹೆಣ್ಣಿನ ಜೀವನದ ಸಾರ್ಥಕ್ಯ ಇರುವುದು. ಹೆಣ್ಣುತನದ ವಿಕಾಸದ ಚರಮಸೀಮೆ, ಮಾತೃತ್ವದಲ್ಲಿ, ಸ್ತ್ರೀಯು ಶಾರೀರಿಕವಾಗಿ, ಮಾನಸಿಕವಾಗಿ, ಯೋಗ್ಯ ರೀತಿಯಲ್ಲಿ ಬೆಳೆಯುವುದು ಮಾತೃತ್ವದಿಂದಲೇ.

ಶಕ್ತಿ ಮಾತೆಯ ಸ್ವರೂಪಳಾದ ಸರಸ್ವತಿಯು ವಿದ್ಯೆಯ, ಲಕ್ಷ್ಮೀಯು ಸಂಪತ್ತಿನ, ಪಾರ್ವತಿಯೂ ಪ್ರತಾಪದ, ಪ್ರತೀಕವೆನಿಸಿದ್ದಾರೆ. ಈಶ್ವರನು ಅರ್ಧ ಗಂಡು, ಅರ್ಧ ಹೆಣ್ಣು ಆಗಿ ಅರ್ಧನಾರೀಶ್ವರನೆನಿಸಿಕೊಂಡಿದ್ದಾರೆ. ಶಕ್ತಿ ಮಾತೆಯ ಅಥವಾ ದೇವಿಯ ಕರುಣೆಯಿಲ್ಲದೆ ಹೋದರ, ಬ್ರಹ್ಮ ವಿಷ್ಣು ಮಹೇಶ್ವರರೆಂಬ ತ್ರಿಮೂರ್ತಿಗಳು ಮಾನವರಿಗೆ ಸಹಾಯ ಮಾಡಲಾರರು ಹಾಗೂ ಮುಕ್ತಿಯನ್ನು ಕರುಣಿಸಲಾರರು. ಆದುದರಿಂದಲೇ ನಾವು ಸರಸ್ವತಿ ಚತುರಾಸನ, ಲಕ್ಷ್ಮೀನೃಸಿಂಹ, ಲಕ್ಷ್ಮೀನಾರಾಯಣ, ಸೀತಾರಾಮ, ರಾಧಾಕೃಷ್ಣ, ಉಮಾಮಹೇಶ್ವರ, ಪಾರ್ವತಿಪರಮೇಶ್ವರ ಶಿವಶಕ್ತಿ ಎಂದು ಹೆಣ್ಣು ಗಂಡು ಎರಡನ್ನೂ ಒಟ್ಟಿಗೇ ಪೂಜಿಸುತ್ತೇವೆ.